ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ಸಂಪುಟ ೧೬೧ Volume 161 | ಮೈಸೂರು, ಗುರುವಾರ, ೧೯, ಫೆಬ್ರವರಿ, ೨೦೨೬ (ಮಾಘ, ೩೦, ಶಕವರ್ಷ, ೧೯೪೭) MYSURU, THURSDAY, 19, FEBRUARY, 2026 (MAGHA, 30, SHAKAVARSHA, 1947) | ಸಂಚಿಕೆ ೧೬ Issue 16

ಭಾಗ ೬ಎ

ಮೈಸೂರು ವಿಭಾಗಕ್ಕೆ ಮತ್ತು ಮೈಸೂರು, ಮಂಡ್ಯ, ಹಾಸನ, ಚಿಕ್ಕಮಗಳೂರು, ದಕ್ಷಿಣಕನ್ನಡ, ಕೊಡಗು, ಚಾಮರಾಜನಗರ, ಉಡುಪಿ ಜಿಲ್ಲೆಗಳಿಗೆ ಅನ್ವಯವಾಗುವ ಅಧಿಸೂಚನೆಗಳು ಮತ್ತು ಆದೇಶಗಳು.

ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ದಂಡಾಧಿಕಾರಿಗಳ ಕಾರ್ಯಾಲಯ,
ಚಿಕ್ಕಮಗಳೂರು – 577101, ಚಿಕ್ಕಮಗಳೂರು ಜಿಲ್ಲೆ, ಕರ್ನಾಟಕ.
OFFICE OF THE DEPUTY COMMISSIONER AND DISTRICT MAGISTRATE,
Chikkamagaluru – 577101, Chikkamagaluru District, Karnataka.
Tel. 08262-230401(O), 230402(R), 231499(ADC), 235262(Rev-Sec), Email: deo.cmagalur@gmail.com/dcckmlr@gmail.com

ಸಂಖ್ಯೆ:DCCKM-ELN0ELNS(GP)/10/2025/CNo: 1009338 ದಿನಾಂಕ:03.02.2026

-: ಪರಿಷ್ಕೃತ ಅಧಿಕೃತ ಜ್ಞಾಪನ :-

(ಕರ್ನಾಟಕ ಪಂಚಾಯತ್ ರಾಜ್ ಕಾಯ್ದೆ 193 ಕಲಂ 8(1)ರಡಿ)

ವಿಷಯ: ಗ್ರಾಮ ಪಂಚಾಯಿತಿಗಳಿಗೆ ಆಡಳಿತಾಧಿಕಾರಿಗಳನ್ನು ನೇಮಕ ಮಾಡುವ ಕುರಿತು.

ಉಲ್ಲೇಖ:
1. ಸರ್ಕಾರದ ಕಾರ್ಯದರ್ಶಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಕರ್ನಾಟಕ ಸರ್ಕಾರದ ಸಚಿವಾಲಯ, ಬಹುಮಹಡಿಗಳ ಕಟ್ಟಡ, ಬೆಂಗಳೂರು ರವರ ಕಛೇರಿ ಪತ್ರ ಸಂಖ್ಯೆ: ಗ್ರಾಅಪಂ 1003 ಗ್ರಾಅಪಂ 2025 ದಿನಾಂಕ:16-01-2026
2. ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ 1993 ಪ್ರಕರಣ 41 ಮತ್ತು 42 ರಂತೆ.
3. ಈ ಕಛೇರಿ ಅಧಿಕೃತ ಜ್ಞಾಪನ ಸಮಸಂಖ್ಯೆ ದಿನಾಂಕ:27-01-2026

ಿಆ ತಹಸೀಲ್ದಾರ್, ಕೊಪ್ಪತಾಲ್ಲೂಕುರವರ ಪತ್ರ ಸಂಖ್ಯೆ: ಇಎಲ್ಎನ್ ಸಿಆರ್/01/2025-26 ದಿನಾಂಕ:03-02-2026.

******

ಗ್ರಾಮ ಪಂಚಾಯಿತಿಗಳನ್ನು ಒಳಗೊಂಡಂತೆ ಪಂಚಾಯತ್ ರಾಜ್ ಸಂಸ್ಥೆಗಳ ಸದಸ್ಯರ ಅವಧಿಯು, ಅವುಗಳ ಮೊದಲ ಸಭೆಗಾಗಿ ಗೊತ್ತುಪಡಿಸಿದ ದಿನಾಂಕದಿಂದ 5 ವರ್ಷಗಳ ಅವಧಿಯವರೆಗೆ ಅಸ್ತಿತ್ವದಲ್ಲಿದ್ದು, 5 ವರ್ಷಗಳು ಮುಗಿದ ನಂತರದ ದಿನಾಂಕದಿಂದ ಗ್ರಾಮ ಪಂಚಾಯಿತಿಯ ಅವಧಿಯು

ಮುಕ್ತಾಯಗೊಳ್ಳಲಿದ್ದು, ಈ ಹಿಂದೆ 2020-2025 ನೇ ಸಾಲಿಗೆ ರಚಿತವಾಗಿದ್ದ ರಾಜ್ಯದ ಗ್ರಾಮ ಪಂಚಾಯಿತಿಗಳ ಅವಧಿಯು 2026 ನೇ ಜನವರಿ, ಫೆಬ್ರುವರಿ, ಮಾರ್ಚ್ ಹಾಗೂ ಮುಂದಿನ ತಿಂಗಳುಗಳ ವಿವಿಧ ದಿನಾಂಕಗಳಂದು ಮುಕ್ತಾಯಗೊಳ್ಳಲಿದ್ದು, 2026-2031 ರ ಅವಧಿಗಾಗಿ ಗ್ರಾಮ ಪಂಚಾಯಿತಿಗಳಿಗೆ ಚುನಾವಣೆ ನಡೆದು ಗ್ರಾಮ ಪಂಚಾಯಿತಿಯ ಅಧ್ಯಕ್ಷ ಮತ್ತು ಉಪಾಧ್ಯಕ್ಷರ ಚುನಾವಣೆ ನಡೆಯುವ ದಿನಾಂಕದವರೆಗೆ ಸದರಿ ಗ್ರಾಮ ಪಂಚಾಯಿತಿಗಳಿಗೆ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ 1993 ರ ಪ್ರಕರಣ 8(iii) ರನ್ವಯ ಆಡಳಿತಾಧಿಕಾರಿಗಳನ್ನು ನೇಮಿಸಲು ಉಲ್ಲೇಖ(1) ರ ಪತ್ರದಲ್ಲಿ ನಿರ್ದೇಶಿಸಲಾಗಿರುತ್ತದೆ.

ಕರ್ನಾಟಕ ಗ್ರಾಮಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ 1993ರ ಪ್ರಕರಣ 41 ಮತ್ತು 42 ರಂತೆ ಚಿಕ್ಕಮಗಳೂರು ಜಿಲ್ಲೆಯ ನರಸಿಂಹರಾಜಪುರ ತಾಲ್ಲೂಕಿನಲ್ಲಿ ಅವಧಿ ಪೂರ್ಣಗೊಂಡ ಗ್ರಾಮಪಂಚಾಯ್ತಿಗಳಿಗೆ ಕರ್ನಾಟಕ ಪಂಚಾಯತ್ ರಾಜ್ ಕಾಯ್ದೆ 1993ರ ಕಲಂ 8 ರನ್ವಯ ನರಸಿಂಹರಾಜಪುರ ತಾಲ್ಲೂಕಿನ ಗ್ರಾಮಪಂಚಾಯ್ತಿಗಳಿಗೆ ಅಡಳಿತಾಧಿಕಾರಿಗಳನ್ನು ನೇಮಕ ಮಾಡಿ ಉಲ್ಲೇಖ (3) ರಂತೆ ಆದೇಶಿಸಲಾಗಿರುತ್ತದೆ.

ಮುಂದುವರೆದು, ತಹಸೀಲ್ದಾರ್, ಕೊಪ್ಪ ತಾಲ್ಲೂಕುರವರು ಉಲ್ಲೇಖ(4) ರ ಪತ್ರದಲ್ಲಿ ಕೋರಿರುವಂತೆ, ಉಲ್ಲೇಖ (3) ರಲ್ಲಿನ ಕ್ರಮ ಸಂಖ್ಯೆ: 12 ರಲ್ಲಿನ ಹರಂದೂರು ಗ್ರಾಮ ಪಂಚಾಯಿತಿಗೆ ಮಾತ್ರ ಆಡಳಿತಾಧಿಕಾರಿಯನ್ನು ಈ ಕೆಳಕಂಡಂತೆ ಬದಲಾಯಿಸಿ ಆದೇಶಿಸಿದೆ. **ಉಳಿದಂತೆ ಉಲ್ಲೇಖ (3) ರಲ್ಲಿನ ಈ ಕಛೇರಿ ಆದೇಶದಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ.**

ತಾಲ್ಲೂಕು: ಕೊಪ್ಪ

ಕ್ರ. ಸಂ	ಆಡಳಿತಾಧಿಕಾರಿಯಾಗಿ ನೇಮಕ ಮಾಡಿದ ಅಧಿಕಾರಿಯ ಹೆಸರು/ಹುದ್ದೆ	ದೂರವಾಣಿ ಮೊಬೈಲ್ ಸಂಖ್ಯೆ	ಗ್ರಾಮ ಪಂಚಾಯಿತಿಯ ಹೆಸರು	ಅವಧಿ ಮುಗಿದ/ ಮುಗಿಯುವ ದಿನಾಂಕ
1	ಸಹಾಯಕ ಅಭಿಯಂತರರು, ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪ ವಿಭಾಗ, ಕೊಪ್ಪ	9742965491	ಹರಂದೂರು	01/02/2026

1. ಈ ಅಧಿಸೂಚನೆಯು ಮೇಲ್ಕಂಡ ಗ್ರಾಮಪಂಚಾಯ್ತಿಯ ಚುನಾಯಿತ ಸದಸ್ಯರ ಅವಧಿ ಮುಕ್ತಾಯವಾಗುವ ದಿನಾಂಕದಿಂದ ಜಾರಿಗೆ ಬರುತ್ತದೆ.
2. ಮೇಲಿನಂತೆ ನೇಮಕ ಮಾಡಿರುವ ಆಡಳಿತಾಧಿಕಾರಿಯು ಗ್ರಾಮಪಂಚಾಯ್ತಿ ಪ್ರಭಾರ ವಹಿಸಿಕೊಂಡು ಮಾಹಿತಿಯನ್ನು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾಪಂಚಾಯ್ತಿ, ಚಿಕ್ಕಮಗಳೂರು ಹಾಗೂ ಜಿಲ್ಲಾಧಿಕಾರಿ, ಚಿಕ್ಕಮಗಳೂರು ಇವರಿಗೆ ವರದಿ ಸಲ್ಲಿಸಲು ಸೂಚಿಸಿದೆ.
3. ಮೇಲ್ಕಂಡಂತೆ ನೇಮಿಸಿ ನಿಯೋಜಿಸಿರುವ ಅಧಿಕಾರಿಗಳು ಹೆಚ್ಚುವರಿ ಪ್ರಭಾರದಲ್ಲಿ ಸ್ವತಂತ್ರವಾಗಿ ಆಡಳಿತಾಧಿಕಾರಿ ಕಾರ್ಯನಿರ್ವಹಿಸಲು ಸೂಚಿಸಿದೆ.
4. ಮೇಲ್ಕಂಡ ಅಧಿಕಾರಿಗಳು ಸೂಚಿಸಿರುವ ಗ್ರಾಮಪಂಚಾಯ್ತಿಗಳ ದೈನಂದಿನ ಕಾರ್ಯನಿರ್ವಹಣೆಯನ್ನು ಕರ್ನಾಟಕ ಪಂಚಾಯತ್ ರಾಜ್ ಕಾಯ್ದೆ / ನಿಯಮ ಹಾಗೂ ಆಯಾ ಯೋಜನೆಗಳ ನಿಯಮ ಮಾರ್ಗಸೂಚಿಗಳಂತೆ ಕಾರ್ಯನಿರ್ವಹಿಸತಕ್ಕದ್ದು.
5. ಮೇಲ್ಕಂಡ ಗ್ರಾಮಪಂಚಾಯ್ತಿಗಳಿಗೆ ಸದಸ್ಯರುಗಳು ಚುನಾಯಿತರಾಗಿ ಪೂರ್ಣ ಪ್ರಮಾಣದಲ್ಲಿ ಚುನಾಯಿತ ಪ್ರತಿನಿಧಿಗಳು ರಚನೆಗೊಂಡು ಅಧಿಕಾರ ಪ್ರಾಪ್ತವಾಗುವ ದಿನಾಂಕದವರೆಗೆ ಈ ಅಧಿಸೂಚನೆ ಜಾರಿಯಲ್ಲಿರುತ್ತದೆ. ತದನಂತರ ಮೇಲ್ಕಂಡ

R.N.I. No. KARBIL/2001/47147 POSTAL REGN. No. RNP/KA/BGS/2202/2017-19
Licensed to post without preayment **WPP No. 297**

ಆಡಳಿತಾಧಿಕಾರಿಯು ಸೂಕ್ತಾನುಸಾರ ಪ್ರಭಾರವನ್ನು ಸಂಬಂಧಿಸಿದವರಿಗೆ ವಹಿಸಿಕೊಟ್ಟು ಕಾರ್ಯದಿಂದ ಬಿಡುಗಡೆ ಹೊಂದಲು ಸೂಚಿಸಿದೆ.

6. ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ 1993ರ ಪ್ರಕರಣ 8(4) ರನ್ವಯ ಆಡಳಿತಾಧಿಕಾರಿಯನ್ನು ಈ ಅಧಿನಿಯಮದ ಉದ್ದೇಶಕ್ಕಾಗಿ ಕ್ರಮಬದ್ಧವಾಗಿ ರಚಿಸಿದ ಗ್ರಾಮಪಂಚಾಯ್ತಿ ಎಂದು ಭಾವಿಸಲಾಗಿದೆ.
7. ಸದರಿ ಅಧಿನಿಯಮದ ಪ್ರಕರಣ 8(3) ರನ್ವಯ ಆಡಳಿತಾಧಿಕಾರಿಯು ಗ್ರಾಮಪಂಚಾಯ್ತಿಯ ಎಲ್ಲಾ ಅಧಿಕಾರಗಳನ್ನು ಮತ್ತು ಕರ್ತವ್ಯಗಳನ್ನು ಚಲಾಯಿಸತಕ್ಕದ್ದು ಮತ್ತು ನೆರವೇರಿಸತಕ್ಕದ್ದು.
8. ಕರ್ನಾಟಕ ಗ್ರಾಮಸ್ವರಾಜ್ ಮತ್ತು ಪಂಚಾಯತ್ ರಾಜ್ (ಗ್ರಾಮಪಂಚಾಯ್ತಿಗಳ ಅಯವ್ಯಯ ಮತ್ತು ಲೆಕ್ಕಪತ್ರಗಳು) ನಿಯಮಗಳು 2006 ರನ್ವಯ ಗ್ರಾಮಪಂಚಾಯ್ತಿಯ ಹಣಕಾಸಿನ ವ್ಯವಹಾರವನ್ನು ಆಡಳಿತಾಧಿಕಾರಿ ಮತ್ತು ಪಂಚಾಯ್ತಿ ಅಭಿವೃದ್ಧಿ ಅಧಿಕಾರಿ ಜಂಟಿಯಾಗಿ ನಿರ್ವಹಿಸತಕ್ಕದ್ದು.
9. ವಾರ್ಡ್ ಸಭೆ ಮತ್ತು ಗ್ರಾಮಸಭೆಗಳನ್ನು ಕಾಲ ಕಾಲಕ್ಕೆ ನಡೆಸಲು ಅಗತ್ಯ ಕ್ರಮಗಳನ್ನು ಕೈಗೊಳ್ಳತಕ್ಕದ್ದು.
10. ಅಧಿನಿಯಮದ ಪ್ರಕರಣ 58 ರಂತೆ ಗ್ರಾಮಪಂಚಾಯ್ತಿ ಪ್ರಕಾರ್ಯಗಳನ್ನು ನೆರವೇರಿಸತಕ್ಕದ್ದು.
11. ಅಧಿನಿಯಮದ ಪ್ರಕರಣ 60 ರಂತೆ ಗ್ರಾಮಪಂಚಾಯ್ತಿಯ ಸಾಮಾನ್ಯ ಅಧಿಕಾರಗಳನ್ನು ಚಲಾಯಿಸತಕ್ಕದ್ದು.
12. ಅಧಿನಿಯಮದ ಪ್ರಕರಣ 62 ರಂತೆ ಅಧ್ಯಕ್ಷನ ಪ್ರಕಾರ್ಯಗಳು ಮತ್ತು ಅಧಿಕಾರಗಳನ್ನು ಚಲಾಯಿಸತಕ್ಕದ್ದು.
13. ಗ್ರಾಮಪಂಚಾಯ್ತಿ ಗ್ರಂಥಾಲಯಗಳ ನಿರ್ವಹಣೆಯನ್ನು ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಇಲಾಖೆಯ ಸಾರ್ವಜನಿಕ ಗ್ರಂಥಾಲಯ ಇಲಾಖೆಯಿಂದ ಗ್ರಾಮ ಪಂಚಾಯಿತಿಗಳಿಗೆ ವರ್ಗಾಯಿಸಲಾಗಿದ್ದು, ಗ್ರಾಮ ಪಂಚಾಯಿತಿ ಗ್ರಂಥಾಲಯ ನಿರ್ವಹಣೆ ಮಾಡತಕ್ಕದ್ದು, ಮತ್ತು ಗ್ರಂಥಾಲಯ ಮೇಲ್ವಿಚಾರಕರಿಗೆ ಗೌರವಧನವನ್ನು ಮಾಸಿಕವಾಗಿ ಪಾವತಿಸತಕ್ಕದ್ದು.
14. ಗ್ರಾಮ ಪಂಚಾಯಿತಿ ನೌಕರರಿಗೆ ಮಾಸಿಕವಾಗಿ ಕನಿಷ್ಠ ವೇತನ ಪಾವತಿಸತಕ್ಕದ್ದು.
15. ಸರ್ಕಾರದ ಸುತ್ತೋಲೆ ಸಂಖ್ಯೆ: ಗ್ರಾಅಪ 74 ಗ್ರಾಪಂಚಿ 2017 (ಭಾಗ-1) ದಿನಾಂಕ: 12.03.2018 ರಲ್ಲಿ ಗ್ರಾಮ ಪಂಚಾಯಿತಿಗಳು ಯಾವುದೇ ಹುದ್ದೆಗಳಿಗೆ ನೇಮಕಾತಿ ಮಾಡುವುದನ್ನು ಸಂಪೂರ್ಣ ನಿಷೇಧಿಸಲಾಗಿದೆ. ಆಡಳಿತಾಧಿಕಾರಿಯು ಗ್ರಾಮ ಪಂಚಾಯಿತಿಗೆ ಯಾವುದೇ ನೌಕರರನ್ನು ನೇಮಕ ಮಾಡಿಕೊಳ್ಳತಕ್ಕದ್ದಲ್ಲ.

(ನಾಗರಾಜ ಎನ್ ಎಂ, ಭಾ.ಆ.ಸೇ)
ಜಿಲ್ಲಾಧಿಕಾರಿ
ಚಿಕ್ಕಮಗಳೂರು ಜಿಲ್ಲೆ,
ಚಿಕ್ಕಮಗಳೂರು.

PR-35

ಮುದ್ರಕರು ಹಾಗೂ ಪ್ರಕಾಶಕರು:— ಸಂಕಲನಾಧಿಕಾರಿಗಳು, ಕರ್ನಾಟಕ ರಾಜ್ಯಪತ್ರ, ಸರ್ಕಾರಿ ವಿಭಾಗೀಯ ಮುದ್ರಣಾಲಯ, ಮೈಸೂರು.

VIJAY
NELAMANGALA
MUNIDALAPPA
Digitally signed by VIJAY NELAMANGALA MUNIDALAPPA
DN: c=IN, o=E-PROCUREMENT CELL CEG, 2.5.4.20=588b7cb3fea32bf043f61231865669529a569e29a3f077a76878b32da7621141, postalCode=560001, st=Karnataka, serialNumber=f89f88df29205bfdf422120f4c1e04f3323d5c514a0b37a32da5a409b8c06019, cn=VIJAY NELAMANGALA MUNIDALAPPA
Date: 2026.02.19 17:30:59 +05'30'